**ಚಾಸಾ- 1 ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಸಿಸಿ. 29417/2022**

| | |
|---|---|
| **ಸಾಕ್ಷಿದಾರರ ಹೆಸರು** | ಅಬುಬುಕ್ಕರ್ . |
| **ತಂದೆಯ ಹೆಸರು** | ಅಬ್ದುಲ್ ಸಲಾಂ. |
| **ವಯಸ್ಸು** | 40 ವರ್ಷ. |
| **ಉದ್ಯೋಗ** | ವ್ಯವಹಾರ. |
| **ವಾಸ** | ಆರ್.ಟಿ.ನಗರ ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 13.11.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ಈ ಪ್ರಕರಣದ ಆರೋಪಿ ನನಗೆ ಗೊತ್ತು. ಅದೇ ರೀತಿ ಚಾಸಾ-2 ರಿಂದ 18 ರವರು ಸಹ ಗೊತ್ತು. ಈ ಪ್ರಕರಣದಲ್ಲಿ ನನಗೆ ಏನು ಗೊತ್ತಿಲ್ಲ. ನಾನು ಆರೋಪಿಯ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ಹೇಳಿಕೆಯನ್ನು ಅಲ್ಲಗೆಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು. ನನ್ನ ಮತ್ತು ಆರೋಪಿನ ನಡುವೆ ಹಣಕಾಸಿನ ವಿಚಾರದಲ್ಲಿ ಸಣ್ಣ ಪುಟ್ಟ ಮನಸ್ತಾಪ ಉಂಟಾಗಿದ್ದರಿಂದ ನಾನು ಪೊಲೀಸರಿಗೆ ಎರಡು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಮತ್ತು ನಿಪಿ.1 ಮತ್ತು 2 ರಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ಈ ಸಂಬಂದ ನಾನು ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಚಾಸಾ- 1 ಪ್ರಾಸಾ-1**

**<u>ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :</u>**

2021ನೇ ಸಾಲಿನಲ್ಲಿ ನಾನು ಚಾಸಾ4 ಮತ್ತು ಒಂದನೇ ಆರೋಪಿ ಮುನೇಶ್ವರ, ಮಠದಳ್ಳಿ ಕ್ರಿಸೆಂಟ್ಕ ಫೋಥ್ ಕನೆಕ್ಟ್ ಪ್ರೈ ಲಿ. ಕಂಪನಿಯನ್ನು ತೆರೆದು ನಾವು ಮೂರು ಜನ ಡೈರಕ್ಟೆರ್ ಗಳಾಗಿದ್ದೇವು ಎಂದರೆ ಸರಿಯಲ್ಲ. ನಮ್ಮ ಕಂಪನಿಯು ಬೆಂಗಳೂರು ಮತ್ತು ಇತರೆ ಪ್ರಮುಖ ನಗರಗಳಲ್ಲಿ ಖಾಸಗಿ ಕಂಪನಿಗಳಿಗೆ ಕೆಲಸಗಾರರನ್ನು ಕಳುಹಿಸುತ್ತಿದ್ದೇವು ಎಂದರೆ ಸರಿಯಲ್ಲ. ಈಗಿದ್ದಾಗ ಒಂದನೇ ಆರೋಪಿಯು ನನಗೂ ಮತ್ತು ಚಾಸಾ-4 ರವರಿಗೆ ತಿಳಿಯದೇ ಕಂಪನಿಯ ಹೆಸರಿನಲ್ಲಿ ಚಾಸಾ-5 ರಿಂದ 18 ರವರಿಗೆ ವಿದೇಶದಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಅವರಿಂದ ಒಟ್ಟು ರೂ.13,69,000/-ಗಳನ್ನು ಪಡೆದುಕೊಂಡು ಅವರಿಗೆ ಕೆಲಸವನ್ನು ಕೊಡಿಸದೇ ಹಣವನ್ನು ವಾಪಸ್ ಕೊಡದೇ ಒಂದನೇ ಆರೋಪಿ ನಂಬಿಕೆ ದ್ರೋಹ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಎರಡನೇ ಆರೋಪಿ ಒಂದನೇ ಆರೋಪಿ ಕಂಪನಿಯ ಕೆಲಸ ಮಾಡಿಕೊಂಡಿದ್ದು ಆತನು ಸಹ ಚಾಸಾ-19 ರವರನ್ನು ನಂಬಿಸಿ ವಿದೇಶದಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ರೂ.55,000/- ಹಣ ಪಡೆದು ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಒಂದನೇ ಆರೋಪಿ ನನ್ನಿಂದ ರೂ.5ಲಕ್ಷ ಗಳ ಚೆಕ್ಕನ್ನು ಸಾಕ್ಷಿ -20 ರವರಿ ಹೆಸರಿನಲ್ಲಿ ಪಡೆದುಕೊಂಡು ನನ್ನ ಅಕೌಂಟ್ ಗೆ ಹಂತ ಹಂತವಾಗಿ ರೂ.1,72,000/-ಹಣವನ್ನು ಹಾಕಿಸಿಕೊಂಡು ಒಟ್ಟಾರೆಯಾಗಿ ನನ್ನಿಂದ ರೂ.6,72,000/- ಹಣವನ್ನು ಪಡೆದು ವಾಪಸ್ ಕೊಡದೇ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಒಟ್ಟಾರೆಯಾಗಿ ಒಂದನೇ ಆರೋಪಿಯು ಸೇರಿ ರೂ.20,41,000/- ಮತ್ತು ಎರಡನೇ ಆರೋಪಿಯು ರೂ.55,000/- ಒಟ್ಟಾರೆಯಾಗಿ ರೂ.20,96,000/-ಗಳನ್ನು ಪಡೆದುಕೊಂಡು ಮೋಸ ಮಾಡಿರುತ್ತಾರೆ ಎಂದು ನಿಪಿ.1 ರಂತೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿ.05.02.2022 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2ಮತ್ತು 3 ರವರ ಸಮಕ್ಷಮ ನಿಪಿ.2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ.3 ರಂತೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ರಿಂದ 3 ರವರೆಗೆ

**ಚಾಸಾ- 1 ಪ್ರಾಸಾ-1**

ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಆರೋಪಿರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ. ಎಂ ಎಸ್ ಆರೋಪಿ ಪರ ವಕೀಲರು ಪಾಟೀಸವಾಲು ಏನು ಇಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

Accused No.1 and 2 are present. CW-1 is present and examined as PW-1 and documents marked as Ex.P.1, 1a, 2, 2a, and 3.

Further Ld.Sr.APP prays issue summons to other witnesses. But, in the present the CW-1 present and examined as PW-1 and not supported the prosecution case. During course of cross examination of PW-1 by Ld.Sr.APP nothing has been elicited from his mouth. Hence, the prayer of Ld.Sr.APP is rejected and under section 313 of Cr.P.C. Statement dispensed with.
Heard, the argument on both sides. For Judgment . Call on 16.11.2024.
-------

Sri.M.S. advocate has filed

advancement application.
Case taken on today's' board.
Accused No.1 and 2 are present. CW-1 and CW-4 are present and examined as PW-1 and 2 and documents marked as Ex.P.1 to 4, 4(a) and Ex.P.5.
Further Ld.Sr.APP prays issue summons to other witnesses. But, in the present the CW-1 present and filed the Authorization letter and in the evidence the PW-1 turned hostile and not supported the prosecution case.
PW-2 also turned hostile the prosecution case. The Ld.Sr.APP cross examined the PW-1 and PW-2. But, nothing has been elicited from their mouth. Hence, the prayer of Ld.Sr.APP is rejected and under section 313 of Cr.P.C. Statement dispensed with.
Heard, the argument on both sides. For Judgment . Call on 13.11.2024.
III Addl.C.M.M, Bengaluru.